# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಕಂದಾಯ ಅಧಿಕಾರಿಗಳ ಕಛೇರಿ, ಹೊರಮಾವು ಉಪವಲಯ, ಮಹದೇವಪುರ ವಲಯ, ಬೆಂಗಳೂರು

ಸಂಖ್ಯೆ.ಬಿಬಿಎಂಪಿ/ಸ.ಕಂ.ಅ/ಹೊಉವ/ಪಿಆರ್/೬೪/2020-21 ದಿನಾಂಕ: 23-10-2020

*ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿಆರ್/35/2020-21 ದಿನಾಂಕ:21/09/2020 ಹಾಗೂ ನೋಡಲ್ ಅಧಿಕಾರಿ/ಉಪ ಆಯುಕ್ತರು (ಮಹದೇವಪುರ) ರವರು ದಿನಾಂಕ:17/10/2020 ರಂದು ಹೊರಮಾವು ಉಪವಿಭಾಗದ ವಾರ್ಡ್-25 ರ ಕಛೇರಿಯಲ್ಲಿ ಸಭೆಯನ್ನು ಏರ್ಪಡಿಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತದೆ.*

ಉಪಸ್ಥಿತರು:

| ಕ್ರಸಂ | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| | | ಅಧಿಕಾರಿಗಳು | |
| 1 | ಶ್ರೀಮತಿ.ಸರೋಜಾದೇವಿ | ನೋಡಲ್ ಅಧಿಕಾರಿ ವಾ.ನಂ.25 ಹಾಗೂ ಉಪ ಆಯುಕ್ತರು (ಮಹದೇವಪುರ) | 9480684059 |
| 2 | ಶ್ರೀ.ಚಂದ್ರಶೇಖರ್ | ಸಹಾಯಕ ಕಾರ್ಯಪಾಲಕ ಅಭಿಯಂತರರು (ಹೊರಮಾವು) | 9844587466 |
| 3 | ಸತೀಶ್ | ಇ.ಇ (ಬಿಬಿಎಂಪಿ) | 9448426417 |
| 4 | ಶ್ರೀ.ಚಂದನ್.ಎಸ್ | ಬಿಡಬ್ಲೂಎಸ್ಎಸ್‌ಬಿ | 9449390066 |
| 5 | ಶ್ರೀ.ರಕ್ಷ.ಬಿ.ಎನ್ | ಬಿಬಿಎಂಪಿ, (ಲೇಕ್ಸ್)ಇಲಾಖೆ | 9632298117 |
| 6 | ಶ್ರೀ.ವಿನೋದ್‌ಕುಮಾರ್ | ವಾರ್ಡ್ ನಂ.25 ಕಂದಾಯ ಪರಿವೀಕ್ಷಕರು | 9900116515 |
| 7 | ಶ್ರೀ.ಹರೀಶ್ ಕುಮಾರ್ | ಕಿರಿಯ ಆರೋಗ್ಯ ಪರಿವೀಕ್ಷಕರು | - |
| | | ಸಂಘದ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು. | |
| 8 | ಮೈಕೆಲ್.ಹೆಚ್.ಆರ್ | ಪಿಟಿಆರ್‌ಎ ಕಮಿಟಿ ಮೆಂಬರ್ | 9987150048 |
| 9 | ಸುರೇಶ್ | ಸಿಪಿಟಿಆರ್‌ಎ ಕಮಿಟಿ ಮೆಂಬರ್ | 9538882179 |
| 10 | ನವೀನ್ ಕುಮಾರ್ | ಎಎಸ್‌ಎಲ್ ಲೇಔಟ್ | 9686195473 |
| 11 | ಎಂ.ಲಿಯೋ ಕ್ರಿಸ್ಟೋ | ಪಿಟಿಆರ್‌ಎ ಕಮಿಟಿ ಮೆಂಬರ್ | 9845924885 |
| 12 | ಜಾರ್ಜ್ | ನಿಸರ್ಗ ಕಾಲೋನಿ | 9741912020 |
| 13 | ವೀರಣ್ಣ | ಸ್ಟ್ರೀಟ್ ಲೈಟ್ | 9740538454 |
| 14 | ವಾರ್ಕೆಟ್ ತಾಮಸ್ (ಪ್ರೆಸಿಡೆಂಡ್)<br>ಜಾನ್ ಜೇಕಬ್ | ಪ್ರಕೃತಿ ಟೌನ್‌ಶಿಪ್ ರೆಸಿಡೆನ್ಸ್ ಅಸೋಸಿಯೇಷನ್ಸ್ | 9449597741<br>9741008406 |
| 15 | ಸುಜಾತ ಎಸ್ ಪಿಳ್ಳೈ | - | 9620684594 |
| 16 | ಸಿಂದು | - | 9686804536 |

Scanned with CamScanner

ಮಾನ್ಯ ನೋಡಲ್ ಅಧಿಕಾರಿ/ಉಪ ಆಯುಕ್ತರು (ಮಹದೇವಪುರ) ರವರ ಸಮ್ಮುಖದಲ್ಲಿ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ/ಸಿಬ್ಬಂದಿ ಇತರೆ ಸಂಘ ಸಂಸ್ಥೆಗಳು ಸಾರ್ವಜನಿಕರಿಗೆ ಸುಸ್ವಾಗತ ಕೋರುತ್ತಾ, ವಾರ್ಡ್ ನಂ.25 ಕೋವಿಡ್-19 ಬಗ್ಗೆ ಮಾತನಾಡುತ್ತಾ ಪ್ರತಿಯೊಬ್ಬರು ಸ್ವಾಬ್ ಟೆಸ್ಟ್ ಮಾಡಿಕೊಳ್ಳಲು ಕೋರಲಾಯಿತು. ನಂತರ ಬಿಬಿಎಂಪಿ ವಾರ್ಡ್ ನಂ.25 ರ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾರ್ಯ, ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಸಾರ್ವಜನಿಕ ಆರೋಗ್ಯ, ನಗರದ ಸ್ವಚ್ಛತೆ, ರಸ್ತೆ ನಿರ್ವಹಣೆ, ಬೃಹತ್ ನೀರುಗಾಲುವೆಗಳ ನಿರ್ವಹಣೆ, ಬೀದಿ ದೀಪಗಳ ನಿರ್ವಹಣೆ, ಕಲ್ಯಾಣ ಕಾರ್ಯಕ್ರಮಗಳು, 110 ಹಳ್ಳಿಗಳ ವ್ಯಾಪ್ತಿಯಲ್ಲಿ ಬಿಡಬ್ಲೂಎಸ್ಎಸ್‌ಬಿ ರವರು ಕೊಳವೆ ಸಾಲುಗಳ ಅಳವಡಿಸುತ್ತಿರುವ ಸಂಬಂಧ ಹಾಗೂ ಸಾರ್ವಜನಿಕರ ಸಮಸ್ಯೆ ಕುಂದುಕೊರತೆಗಳನ್ನು ಬಗೆಹರಿಸುವಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿ ಹಾಗೂ ಸಾರ್ವಜನಿಕರಿಗೆ ಸುಸ್ವಾಗತ ಕೋರಿ ಸಭೆಯನ್ನು ಆರಂಭಿಸಿದರು.

## ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚೆ:-

**ಟೋನಿ ಸ್ವಾಮಿ:-** ಮಳೆ ಪರಿಹಾರ ಧನ ಪಡೆಯಲು ಇನ್ನು ಕೆಲವು ಫಲಾನುಭವಿಗಳ ಹೆಸರು ಬಿಟ್ಟು ಹೋಗಿರುತ್ತದೆ. ಅವರುಗಳ ಹೆಸರನ್ನು ಸೇರಿಸಿ ಧನ ಸಹಾಯ ಮಂಜೂರು ಮಾಡಲು ಕೋರಿರುತ್ತಾರೆ. ಹಾಗೂ ಪರಿಹಾರವನ್ನು ಈಗಾಗಲೇ 50%ರಷ್ಟು ಫಲಾನುಭವಿಗಳಿಗೆ ಡಿಸಿ ಬಿಲ್ಲಿನ ಮುಖಾಂತರ ಧನ ಸಹಾಯ ಮಾಡಿದ್ದು, ಧನ್ಯವಾದಗಳನ್ನು ಸಲ್ಲಿಸಿರುತ್ತಾರೆ. ಸದರಿ ಬಡಾವಣೆಯ ಹಾಗೂ ಗೋಡೆ ಕಟ್ಟುವ, ಮತ್ತು ರಾಜಕಾಲುವೆ ಬಗ್ಗೆ ಎಸ್.ಡಬ್ಲ್ಯೂ.ಡಿ ರವರ ಇಲಾಖೆಯಿಂದ Govt Proposal ಕಳುಹಿಸಿರುವ ಬಗ್ಗೆ ಕ್ರಮದ ವಿವರಗಳನ್ನು ಕೋರಿರುತ್ತಾರೆ.

ಎಸ್.ಡಬ್ಲ್ಯೂ.ಡಿ:- ಸದರಿ ವಿಷಯದ Govt Proposal ಕಡತದ ವಿಲೇಯಾಗಿದೆ.

**ಪಿಳ್ಳಪ್ಪ:-** ಸದರಿ ಪ್ರದೇಶದ ಮುಖ್ಯ ರಸ್ತೆಗಳಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಕಲ್ವರ್ಟ್ ಮಾಡಿಸಿ ಮೇಜರ್ ಡಿಸಿಲ್ಟ್‌ಗಳಿಂದ ರಸ್ತೆಗಳಲ್ಲಿ ಜನರ ಓಡಾಟ ಸುಗಮ ಸಂಚಾರ ಮಾಡಲು ಆಗುತ್ತಿಲ್ಲ ಆದ್ದರಿಂದ ಗುತ್ತಿಗೆದಾರರಿಗೆ ನೀಡಿರುವ ಬಗ್ಗೆ ಚರ್ಚಿಸಿರುತ್ತಾರೆ.

**ಮೇಜರ್ ರಸ್ತೆ:-** 13ನೇ ಕ್ರಾಸ್ ಎರಡು ಕಲ್ವರ್ಟ್, Crossing wall Chambers. ಸರ್ಕಾರದಿಂದ ಬಿಡುಗಡೆ ಅನುದಾನ ಮೊತ್ತಗಳಲ್ಲಿ ಬಾಲಾಜಿ ಲೇಔಟ್. ಸ್ಯಾನಿಟರಿ ನೀರನ್ನು ಎಸ್.ಡಬ್ಲ್ಯೂ.ಡಿ ಚೇಂಬರ್ಸ್‌ಗಳಿಗೆ ಜೋಡಣೆ ಮಾಡಿರುವವರಿಗೆ ಗುರುತಿನ ಜರೂರಾಗಿ ನೋಟೀಸ್ ಜಾರಿ ಮಾಡಲು ಕೋರಿರುತ್ತಾರೆ. ಈಗಾಗಲೇ ಬಿಬಿಎಂಪಿ/ ಮಾಲಿನ್ಯ ನಿಯಂತ್ರಣ ಪ್ರಮಾಣ ಪತ್ರ ಬರೆಯಲಾಗಿದೆ. ಇದರ ಬಗ್ಗೆ ಕ್ರಮ ಕೈಗೊಳ್ಳಲು ಕೋರಿರುತ್ತಾರೆ. ಬೀದಿ ದೀಪಗಳು ಇಲ್ಲದಿರುವುದರಿಂದ, ಕಳ್ಳತನದ ಕಾಟ ಹೆಚ್ಚಾಗಿರುತ್ತದೆ.

Golden Forms:- ವಾರ್ಡ್ ನಂ.25, ಬಂಜಾರ ಬೇಕರಿ ಜಂಕ್ಷನ್ ಭಾಗದ ರಸ್ತೆ ವಾರ್ಡ್ ನಂ.25 / 26 ಕ್ಕೆ ಸಂಬಂಧಪಟ್ಟಂತೆ ಮುಖ್ಯವಾಗಿ ರಸ್ತೆಗಳನ್ನು ಮೋಟರಬೆಲ್ ರಸ್ತೆ ಮಾಡಿಕೊಡಲು ಕೋರಿರುತ್ತಾರೆ. ಈ ಬಗ್ಗೆ ಸಹಾಯಕ ಅಭಿಯಂತರರು ರವರು ಮಾತನಾಡುತ್ತಾ, ರಸ್ತೆಗಳನ್ನು ಸರಿಪಡಿಸಲು ಬಜೆಟ್ ಅಲಾಟ್‌ಮೆಂಟ್ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ತಿಳಿಸಿದರು.

Scanned with CamScanner

**ಶ್ರೀಮತಿ.ಸುಜಾತ ನಂದನ ಕಾಲೋನಿ:-** ವಾರ್ಡ್-25 ರಲ್ಲಿ ಕಸಗಳನ್ನು ಎಲ್ಲಾ ಕಡೆ ಚೆಲ್ಲಾಡುತ್ತಿರುತ್ತಾರೆ. ಖಾಲಿ ನಿವೇಶನಗಳನ್ನು ಗುರುತಿಸಿ Fine Impose ಮಾಡಲು ಹಾಗೂ ಗೋಡೆ ಮೇಲೆ Historical ಮಾಡಬಹುದಾಗಿದೆ ಎಂದು ಸೂಚಿಸಿರುತ್ತಾರೆ.

Horuculture dept – Tree Trimming ಮಾಡಿಸಲು ಹಾಗೂ ರಸ್ತೆಗಳು ಹಾಳಾಗಿದ್ದು, ವಾಯು ಮಾಲಿನ್ಯವಾಗಿರುತ್ತದೆ. – ಮೋಟರಬಲ್ ರಸ್ತೆ, 10ನೇ ಮೈನ್ – ಫುಟ್‌ಪಾತ್ ತೆರವುಗೊಳಿಸಿ ರೈಲ್ವೇ ರಸ್ತೆ Encroachment ತೆರವುಗೊಳಿಸಲು ಕೋರಿರುತ್ತಾರೆ.

**ಶ್ರೀ.ವ್ಯಾಲಿ ಥಾಮಸ್:-** ಸದರಿಯವರು ಮಾತನಾಡುತ್ತಾ, 1ನೇ ಕ್ರಾಸ್, 2ನೇ ಬ್ಲಾಕ್, ಪ್ರಕೃತಿ ಲೇಔಟ್ ನ ನಿವಾಸಿಗಳಾದ ಸುಜನ್‌ಕುಮಾರ್ ರವರು ಒಟ್ಟು 9 ಮನೆಗಳಿಗೆ ಬಿಬಿಎಂಪಿ ಬೋರ್‌ವೆಲ್ ನೀರು (ವಾಟರ್ ತೆಫ್ಟ್) ಹೋಗುತ್ತಿರುವ ಬಗ್ಗೆ ಲಾ ಅಂಡ್ ಆರ್ಡರ್‌ನ್ನು ನಿಯಮ ಪಾಲಿಸಲು ಕೋರಿರುತ್ತಾರೆ. ಹಾಗೂ ಆರ್.ಸಿ.ಸಿ ಡ್ರೈನ್ ಒಂದು ಕಡೆ ಮಾತ್ರ ಆಗಿದೆ. ಅಕ್ಕ ಪಕ್ಕದ ರಸ್ತೆ ಕಡೆ ಮಾಡುತ್ತಿಲ್ಲ. 10ನೇ ಎ ಸ್ಟ್ರೀಟ್, 1ನೇ ಬ್ಲಾಕ್, ವಾಯು ಮಾಲಿನ್ಯ/ಸ್ಯಾನಿಟರಿ ತೊಂದರೆಗಳನ್ನು ಸರಿಪಡಿಸಲು ಕೋರಿರುತ್ತಾರೆ.

**ನವೀನ್:-** ಎಸ್.ಎಲ್.ವಿ ಬಡಾವಣೆ ಬೆಸ್ಕಾಂ ರವರಿಂದ ವಾರ್ಡ್ ನಂ.25 Transformer Earthening ಆಗುತ್ತಿರುವುದರಿಂದ Disconnection ದುರಸ್ತಿ ಮಾಡಿ Reconnect ಮಾಡಲು ಬೆಸ್ಕಾಂ ರವರಿಗೆ ಕೋರಿರುತ್ತಾರೆ.

**ಶಶಿಕುಮಾರ್:-** ಮುನಿರೆಡ್ಡಿ ಬಡಾವಣೆ ಸೈಟ್ ನಂ.29, 2ನೇ ಮುಖ್ಯರಸ್ತೆ, ಹೊರಮಾವು ರವರಿಗೆ ಕಸ ಸ್ವಚ್ಛಗೊಳಿಸಲು ಕೋರಿರುತ್ತಾರೆ.

ಸಭೆಯನ್ನು ಮುಕ್ತಾಯಗೊಳಿಸುವ ಸಲುವಾಗಿ ಕೊನೆಯದಾಗಿ ಸ.ಕಂ.ಅ ಹೊರಮಾವು ರವರು ಪ್ರಥಮ ಸಭೆಯಲ್ಲಿ ನುರಿತ ಸಲಹೆ ಸೂಚನೆಗಳನ್ನು ಚರ್ಚಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ, ವಾರ್ಡ್‌ನ್ನು ಅಭಿವೃದ್ಧಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಿಸುತ್ತಾ, ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ನೋಡಲ್ ಅಧಿಕಾರಿ ವಾರ್ಡ್ ನಂ.25
ಹಾಗೂ ಉಪ ಆಯುಕ್ತರು
(ಮಹದೇವಪುರ) ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರು
ಹೊರಮಾವು ಉಪವಿಭಾಗ

Scanned with CamScanner